ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 140/2015**

**ಫ್ರಾಸಾ- 29 ಚಾಸಾ- 51**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಕೆ ಟಿ ಗುರುರಾಜ್ |
| ತಂದೆಯ ಹೆಸರುಃ | : | ಕೆ ಎಸ್ ತೋಪಯ್ಯ ನಾಯ್ಕ |
| ವಯಸ್ಸುಃ | : | 47 ವರ್ಷ |
| ಉದ್ಯೋಗಃ | : | ಪೊಲೀಸ್ ನಿರೀಕ್ಷಕರು |
| ವಾಸ | : | ಶಿವಮೊಗ್ಗ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 17-07-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 27-11-2010ರಿಂದ 3-10-2013ರವರೆಗೆ ಚಿಕ್ಕಮಗಳೂರು ಲೋಕಾಯುಕ್ತ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ಮೇಲಧಿಕಾರಿಗಳ ಆದೇಶದಂತೆ ದಿಃ26-7-13ರಂದು ಬೆಳಿಗ್ಗೆ 7 ಗಂಟೆಗೆ ಹಾಸನ ಲೋಕಾಯುಕ್ತ ಕಛೇರಿಯ ಪೊಲೀಸ್ ಉಪಾಧೀಕ್ಷಕರ ಮುಂದೆ ವರದಿ ಮಾಡಿಕೊಂಡಿರುತ್ತೇನೆ. ಅವರು ಈ ಪ್ರಕರಣದ ವಿಚಾರವನ್ನು ತಿಳಿಸಿ ಸಾಕ್ಷಿದಾರರಾದ ಗೌರಿಶಂಕರ್ ಮತ್ತು ಶ್ರೀಮತಿ ಚಂದ್ರಮ್ಮರವರನ್ನು ನನಗೆ ಪರಿಚಯಿಸಿದರು ಅಲ್ಲದೆ ಮೂಲ ಶೋಧನಾ ವಾರೆಂಟನ್ನು ಲಕೋಟೆಯಲ್ಲಿ ನೀಡಿ ಅದನ್ನು ತೆರೆದು ನಂತರ ಜಾರಿ ಮಾಡಿ ಶೋಧನೆ ನಡೆಸಲು ಸೂಚಿಸಿದರು. ಅದರಂತೆ ನಾನು ನನ್ನ ಸಿಬ್ಬಂದಿಗಳಾದ ಓಂಕಾರಪ್ಪ ಹೆಚ್‌ಸಿ,

ಬಸವರಾಜು ಮತ್ತು ಉಮೇಶರವರೊಂದಿಗೆ ಮತ್ತು ಮೇಲೆ ಹೇಳಿದ ಪಂಚರೊಂದಿಗೆ ಬೆಳಿಗ್ಗೆ 5-15ಗಂಟೆಗೆ ಹಾಸನ ಲೋಕಾಯುಕ್ತ ಕಛೇರಿ ಬಿಟ್ಟು ಕುವೆಂಪುನಗರದಲ್ಲಿರುವ ಆರೋಪಿತರ ವಾಸದ ಮನೆಯನ್ನು ಬೆಳಿಗ್ಗೆ 5-50 ಗಂಟೆಗೆ ತಲುಪಿದೆನು. ಅಲ್ಲಿ ಅವರ ಕಾಂಪೌಂಡ್ ಗೇಟಿಗೆ ಬೀಗ ಹಾಕಲಾಗಿತ್ತು. ಗೇಟನ್ನು ಬಡಿದಾಗ ಒಳಗಿನಿಂದ ಒಬ್ಬ ವ್ಯಕ್ತಿ ಹೊರಗೆ ಬಂದರು. ಅವರಿಗೆ ನಮ್ಮ ಪರಿಚಯವನ್ನು ಹೇಳಿ, ಅವರ ಹೆಸರನ್ನು ಕೇಳಲಾಗಿ, ತನ್ನ ಹೆಸರು ಮಂಜುನಾಥ ಬಿನ್ ಸಣ್ಣರಾಮಯ್ಯ, ಕಛೇರಿ ಅಧೀಕ್ಷಕರು, ಚಾಮರಾಜೇಂದ್ರ ಸರ್ಕಾರಿ ಆಸ್ಪತ್ರೆ ಹಾಸನ ಎಂದು ತಿಳಿಸಿದರು.

3.ಅವರು ಕಾಂಪೌಂಡ್ ಬೀಗವನ್ನು ತೆಗೆದರು. ನಂತರ ನಾವು ಹಾಸನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹೊರಡಿಸಿದ ಶೋಧನಾ ವಾರೆಂಟನ್ನು ಅವರಿಗೆ ತೋರಿಸಿದೆವು. ಅದನ್ನು ಓದಿಕೊಂಡು ಅವರು ತಿಳಿದುಕೊಂಡರು. ಪಂಚರ ಸಮಕ್ಷಮ ಬೆಳಿಗ್ಗೆ 6 ಗಂಟೆಗೆ ಆ ವಾರೆಂಟಿಗೆ ಸಹಿ ಹಾಕಿದರು. ನಾನು ಮತ್ತು ಪಂಚರು ಸಹ ಆ ವಾರೆಂಟಿಗೆ ಸಹಿ ಹಾಕಿದೆವು. ಆರೋಪಿತರ ಸಮಕ್ಷಮ ನಮ್ಮನ್ನು ನಾವು ಶೋಧನೆ ಮಾಡಿಕೊಂಡೆವು. ಬೆಳಿಗ್ಗೆ 6.10ಗಂಟೆಗೆ ಶೋಧನೆಯನ್ನು ಪ್ರಾರಂಭಿಸಿದೆವು. ಆ ಮನೆಯ ಶೋಧನೆಯನ್ನು ಆರೋಪಿತರು ಹಾಗೂ ಅವರ ಹೆಂಡತಿ ಪದ್ಮಾರವರ ಸಮಕ್ಷಮ ಪ್ರಾರಂಭಿಸಿದೆವು. ಕಾಂಪೌಂಡ್ ಒಳಗಿನ ಆವರಣವನ್ನು ಪರಿಶೀಲಿಸಿದಾಗ ಕೆಎ-20-ಎಲ್-3612ರ ಹೋಂಡಾ ಆಕ್ಟಿವಾ ದ್ವಿಚಕ್ರ ವಾಹನ ಇದ್ದು ಅದರ ಮೀಟರ್ ರೀಡಿಂಗ್ 56628 ಇತ್ತು. ಇನ್ನೊಂದು ದ್ವಿಚಕ್ರವಾಹನ ಕೆಎ-13ಡಬ್ಲ್ಯೂ-5674 ಹೋಂಡಾ ಆಕ್ಟಿವಾ ಇದ್ದು ಅದರ ಮೀಟರ್ ರೀಡಿಂಗ್ 33094 ಆಗಿತ್ತು.

4.ಮುಖ್ಯ ಪ್ರವೇಶದ್ವಾರದ ವರಾಂಡಾದಲ್ಲಿ ಪಂಚನಾಮೆಯ ಕ್ರಮ ಸಂಖ್ಯೆ 1 ಮತ್ತು 2

ರಲ್ಲಿ ಕಾಣಿಸಿದ ವಸ್ತುಗಳು ಇದ್ದವು. ಅವುಗಳ ಅಂದಾಜು ಮೌಲ್ಯ 5010/- ರೂಪಾಯಿ ಇತ್ತು.

5.ಮನೆಯ ಮುಖ್ಯ ಹಾಲ್ ಪ್ರವೇಶಿಸಿನೋಡಿದಾಗ ಅದರಲ್ಲಿ ಕ್ರ.ಸಂ.1 ರಿಂದ 22ರವರೆಗಿನ ವಸ್ತುಗಳು ಇದ್ದು ಅವುಗಳ ಅಂದಾಜು ಮೌಲ್ಯ 1,30,380/- ರೂಪಾಯಿಗಳಾಗಿದ್ದವು.

6.ಸದರಿ ಹಾಲ್ ನ ಪೂರ್ವದಿಕ್ಕಿನ ಮಾಸ್ಟರ್ ಬೆಡ್ ರೂಂ ಶೋಧಿಸಿದಾಗ ಅಲ್ಲಿ ಕ್ರ.ಸಂ.1 ರಿಂದ 9ರವರೆಗಿನ ವಸ್ತುಗಳು ಇದ್ದು ಅವುಗಳ ಅಂದಾಜು ಮೌಲ್ಯ 1,10,700/- ರೂಪಾಯಿಗಳಾಗಿದ್ದವು.

7.ನಂತರ ಮಾಸ್ಟರ್ ಬೆಡ್ ರೂಂನ ಕಬ್ಬಿಣದ ಬೀರು ಶೋಧಿಸಿದಾಗ ಅದರಲ್ಲಿ ಕ್ರ.ಸಂ.1 ರಿಂದ 10ರಲ್ಲಿ ಕಾಣಿಸಿದ ದಾಖಲೆಗಳು ಇದ್ದವು. ಆ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಕ್ರ.ಸಂ.3 ರಿಂದ 9ರವರೆಗಿನ ದಾಖಲೆಗಳು ಈಗಾಗಲೇ ನಿಪಿ-2 ರಿಂದ 8 ಎಂದು ಗುರುತಿಸಲ್ಪಟ್ಟಿರುತ್ತವೆ. ಕ್ರ.ಸಂ.1, 2 ಮತ್ತು 10ರ ದಾಖಲೆಯನ್ನು ಈಗ ನೋಡುತ್ತಿದ್ದು ಅವುಗಳನ್ನು 148ರಿಂದ 150 ಎಂದು ಗುರುತಿಸಲಾಯಿತು. ಆರೋಪಿತರ ಹೆಂಡತಿ ಶ್ರೀಮತಿ ಪದ್ಮಾರವರ ಹೆಸರಿನಲ್ಲಿ ಹೆಚ್ ಪಿ ಕಂಪೆನಿಯ ಗ್ಯಾಸ್ ಪಾಸ್ ಪುಸ್ತಕ ದೊರೆತಿದ್ದು ಅದು ಅವರ ದಿನಬಳಕೆಗೆ ಬೇಕೆಂದು ಕೋರಿಕೊಂಡ ಮೇರೆಗೆ ಅವರ ವಶಕ್ಕೆ ಬಿಟ್ಟಿರುತ್ತೇನೆ.

8.ಮಾಸ್ಟರ್ ಬೆಂಡ್ ರೂಂ ನ ಬೀರುವಿನಲ್ಲಿ ಕ್ರ.ಸಂ.1 ರಿಂದ 9ರಲ್ಲಿ ಕಾಣಿಸಿದ ಆಭರಣಗಳು ಇದ್ದವು. ಹಾಗೆಯೇ ಕ್ರ.ಸಂ.10ರಲ್ಲಿ ಕಾಣಿಸಿದ ಆಭರಣ ಪದ್ಮಾರವರ ಮೈಮೇಲೆ

ಇತ್ತು. ಅವುಗಳನ್ನು ಸಿದ್ದಾಚಾರಿ ಎಂಬ ಅಕ್ಕಸಾಲಿಗರಿಂದ ತೂಕ ಹಾಕಿಸಿದಾಗ ಅದು 46.600ಗ್ರಾಂ ತೂಕ ಇತ್ತು ಮತ್ತು ಅದರ ಅಂದಾಜು ಬೆಲೆ 1,06,100ಎಂದು ಅಕ್ಕಸಾಲಿಗರು ಅಂದಾಜಿಸಿದರು.

9.ಅದೇ ಬೆಡ್ ರೂಂನ ಬೀರುವಿನಲ್ಲಿ ಕ್ರ.ಸಂ.1 ಮತ್ತು 2 ರ ಬೆಳ್ಳಿ ವಸ್ತುಗಳು ದೊರೆತವು ಅವುಗಳನ್ನು ಸಹ ಮೇಲ ಹೇಳಿದ ಅಕ್ಕಸಾಲಿಗರಿಂದ ತೂಕ ಮಾಡಿಸಿದಾಗ ಅದರ ಒಟ್ಟು ತೂಕ 365.80ಗ್ರಾಂ ಇತ್ತು. ಅದರ ಅಂದಾಜು ಮೌಲ್ಯ 9698 ಎಂದು ಅಂದಾಜಿಸಿದರು. ಸದರಿ ಚಿನ್ನ ಮತ್ತು ಬೆಳ್ಳಿ ವಸ್ತುಗಳನ್ನು ಆರೋಪಿತರ ವಶಕ್ಕೆ ನೀಡಿ ಅವರಿಂದ ಸ್ವೀಕೃತಿ ಪಡೆಯಲಾಯಿತು. ಆ ಬೆಡ್ ರೂಂನ ಬೀರುವಿನಲ್ಲಿ 5380ನಗದು ಹಣ ಕೂಡ ಸಿಕ್ಕಿದ್ದು ಅದನ್ನು ಕೂಡ ಅವರ ವಶಕ್ಕೆ ನೀಡಿ ಸ್ವೀಕೃತಿ ಪಡೆದಿರುತ್ತೇವೆ. ಅವರ ಹೆಂಡತಿಯ ಮೈಮೇಲಿದ್ದ ಆಭರಣಗಳನ್ನು ಅವರ ಮೈಮೇಲೆ ಬಿಟ್ಟಿರುತ್ತೇವೆ.

10.ಮಾಸ್ಟರ್ ಬೆಡ್ ರೂಂನ ಬೀರುವಿನಲ್ಲಿ ಕ್ರ.ಸಂ.1 ರಿಂದ 12ರಲ್ಲಿ ಕಾಣಿಸಿದ ಬ್ಯಾಂಕ್ ಪಾಸ್ ಪುಸ್ತಕ ಮತ್ತು ಇತರ ದಾಖಲೆಗಳು ಸಿಕ್ಕಿರುತ್ತವೆ. ಆ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳಲ್ಲಿ ಕ್ರ.ಸಂ. 1 ರಿಂದ 5 ಮತ್ತು 8 ರಿಂದ 11 ಈಗಾಗಲೇ ನಿಪಿ-9 ರಿಂದ 16 ಎಂದು ಗುರುತಿಸಲ್ಪಟ್ಟಿರುತ್ತವೆ. ಕ್ರ.ಸಂ.6,7 ಮತ್ತು 12 ರ ದಾಖಲೆಗಳನ್ನು ಈಗ ನೋಡುತ್ತಿದ್ದು ನಿಪಿ-151 ರಿಂದ ನಿಪಿ-153 ಎಂದು ಗುರುತಿಸಲಾಯಿತು.

11.ಮಾಸ್ಟರ್ ಬೆಡ್ ರೂಂನಲ್ಲಿ ಮರದ ಬೀರು ಇದ್ದು ಅವುಗಳಲ್ಲಿ ಕ್ರ.ಸಂ.1 ರಿಂದ 30ರಲ್ಲಿ ಕಾಣಿಸಿದ ರಶೀದಿ ಮತ್ತು ದಾಖಲೆಗಳು ಇದ್ದವು. ಆ ರಶೀದಿಗಳ ಒಟ್ಟು ಮೌಲ್ಯ

2,72,334 ರೂಪಾಯಿ ಆಗಿತ್ತು. ಆ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗ ನೋಡುತ್ತಿದ್ದು ನಿಪಿ-17 ರಿಂದ 46 ಎಂದು ಗುರುತಿಸಲಾಗಿರುತ್ತದೆ. ಅದೇ ಮಾಸ್ಟರ್ ಬೆಡ್ ರೂಂನ ಮರದ ಬೀರುವಿನಲ್ಲಿ ಕ್ರ.ಸಂ.1 ರಿಂದ 15ರಲ್ಲಿ ಕಾಣಿಸಿದ ಎಲ್ ಐ ಸಿ ಪಾಲಿಸಿ ಹಾಗೂ ಇತರ ದಾಖಲೆಗಳು ಕಂಡುಬಂದವು. ಅವುಗಳು ನಿಪಿ-47 ರಿಂದ 61ಎಂದು ಈಗಾಗಲೇ ಗುರುತಿಸಲಾಗಿರುತ್ತದೆ.

12.ಮಕ್ಕಳ ಬೆಡ್ ರೂಂನಲ್ಲಿ ನೋಡಿದಾಗ ಅಲ್ಲಿ ಕ್ರ.ಸಂ.1 ರಿಂದ 9ರ ವಸ್ತುಗಳು ಕಂಡುಬಂದವು. ಅವುಗಳ ಅಂದಾಜು ಮೌಲ್ಯ 53,000ರೂಪಾಯಿ ಆಗಿರುತ್ತದೆ.

13.ಅಡುಗೆ ಮನೆಯನ್ನು ಶೋಧಿಸಿದಾಗ ಕ್ರ.ಸಂ.1 ರಿಂದ 12ರ ವಸ್ತುಗಳು ಕಂಡುಬಂದಿದ್ದು ಅವುಗಳ ಅಂದಾಜು ಮೌಲ್ಯ 85,900 ಆಗಿತ್ತು.

14.ಸ್ನಾನದ ಮನೆ ಮತ್ತು ಶೌಚಾಲಯಗಳನ್ನು ಶೋಧಿಸಿದಾಗ ಕ್ರ.ಸಂ.1 ರಿಂದ 3ನೇ ವಸ್ತುಗಳು ಸಿಕ್ಕಿದ್ದು ಅವುಗಳ ಅಂದಾಜು ಮೌಲ್ಯ 1150ರೂಪಾಯಿ ಆಗಿತ್ತು.

15.ವಶಪಡಿಸಿಕೊಂಡ ದಾಖಲಾತಿಗಳ ಮೇಲೆ ಪಂಚರು ಮತ್ತು ನಾವು ಸಹಿ ಅವುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ಈ ಎಲ್ಲ ವಿಚಾರವಾಗಿ ಬೆಳಿಗ್ಗೆ 6-10 ರಿಂದ ಮಧ್ಯಾಹ್ನ 3-00ಗಂಟೆಯವರೆಗೆ ಶೋಧನಾ ಮಹಜರನ್ನು ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ-1ರಂತೆ ನಡೆಸಿರುತ್ತೇವೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-1(ಸಿ) ಎಂದು ಗುರುತಿಸಲಾಯಿತು.

16.ಶೋಧನಾ ಸಮಯದಲ್ಲಿ ದೊರೆತ ಚಿನ್ನದ ಒಡವೆ ಮತ್ತು ಬೆಳ್ಳಿಯ ವಸ್ತುಗಳನ್ನು ಆರೋಪಿತರ ಹೆಂಡತಿ ಪದ್ಮಾರವರ ವಶಕ್ಕೆ ನೀಡಿ ಅವರು ನೀಡಿರುವ ರಶೀದಿ ಮತ್ತು ಅಲ್ಲಿ ದೊರೆತ 5380ರೂ ಹಣವನ್ನು ಆರೋಪಿತರ ವಶಕ್ಕೆ ನೀಡಿ ಅವರಿಂದ ಪಡೆದ ಸ್ವೀಕೃತಿಯನ್ನು ಈಗ ನೋಡುತ್ತಿದ್ದು ನಿಪಿ-154 ಮತ್ತು 155 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ರುಜುಗಳಿದ್ದು ಕ್ರಮವಾಗಿ ನಿಪಿ-154(ಎ) ಮತ್ತು 155(ಎ) ಎಂದು ಗುರುತಿಸಲಾಯಿತು.

17.ನನಗೆ ನೀಡಿರುವ ಶೋಧನಾ ವಾರೆಂಟನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು ಈಗಾಗಲೇ ಅದನ್ನು ನಿಪಿ-156 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ರುಜು ಇದ್ದು ನಿಪಿ-156(ಎ) ಎಂದು ಗುರುತಿಸಲಾಯಿತು.

18.ನಂತರ ಅದೇ ದಿನ ಆರೋಪಿತರನ್ನು ಮತ್ತು ವಶಪಡಿಸಿಕೊಂಡ ವಸ್ತುಗಳನ್ನು ಹಾಗೂ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಇಲಾಖಾ ಜೀಪಿನಲ್ಲಿ ಆರೋಪಿತರು ಕರ್ತವ್ಯ ನಿರ್ವಹಿಸುತ್ತಿದ್ದ ಆಸ್ಪತ್ರೆಯಲ್ಲಿ ಅವರು ಕರ್ತವ್ಯ ನಿರ್ವಹಿಸುತ್ತಿದ್ದ ಕೊಠಡಿ ಸಂಖ್ಯೆ 101ಕ್ಕೆ ಹೋದೆನು. ಅಲ್ಲಿ ಅವರಿಗೆ ಶೋಧನಾ ವಾರೆಂಟನ್ನು ಪಂಚರ ಸಮಕ್ಷಮ ಜಾರಿ ಮಾಡಿದೆನು. ಸದರಿ ಶೋಧನಾ ವಾರೆಂಟನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-157 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ರುಜು ಇದ್ದು ನಿಪಿ-157(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿತರ ಸಮಕ್ಷಮ ಸ್ವಯಂಶೋಧನೆ ಮಾಡಿಕೊಂಡು ಮಧ್ಯಾಹ್ನ 3-20ಕ್ಕೆ ಸದರಿ ಕೊಠಡಿಯ ಶೋಧನಾ ಕಾರ್ಯವನ್ನು ಪ್ರಾರಂಭಿಸಿದೆವು. ಸದರಿ ರೂಮಿನಲ್ಲಿದ್ದ ಡ್ರಾ, ಕಬ್ಬಿಣದ ಅಲ್ಮೆರಾ ಎಲ್ಲವನ್ನು ಪರಿಶೀಲಿಸಿದಾಗ ಆರೋಪಿತರಿಗೆ ಸಂಬಂಧಿಸಿದ ಚರ ಮತ್ತು ಸ್ಥಿರಾಸ್ತಿಗಳಿಗೆ ಸಂಬಂಧಿದಂತೆ ಯಾವುದೇ ದಾಖಲೆಗಳಾಗಲೀ ಬೆಲೆಬಾಳುವ ವಸ್ತುಗಳಾಗಲೀ

ಕಂಡುಬರಲಿಲ್ಲ. ಈ ಬಗ್ಗೆ ಶೋಧನಾ ಪಂಚನಾಮೆಯನ್ನು ಮಧ್ಯಾಹ್ನ 3-20ರಿಂದ 4-00 ಗಂಟೆಯವರೆಗೆ ಕ್ರಮ ಜರುಗಿಸಿ ನಿಪಿ-62ರಂತೆ ಪಂಚನಾಮೆ ನಡೆಸಿದೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ-62(ಬಿ) ಎಂದು ಗುರುತಿಸಲಾಯಿತು. ನಂತರ ವಶಪಡಿಸಿಕೊಂಡ ವಸ್ತುಗಳೊಂದಿಗೆ ಹಾಸನ ಲೋಕಾಯುಕ್ತ ಕಛೇರಿಗೆ .ವಾಪಸ್ ಬಂದು ಮೂಲ ಶೋಧನಾ ವಾರೆಂಟ್ ಮತ್ತು ದಾಖಲಾತಿಗಳನ್ನು ಲೋಕಾಯುಕ್ತ ಉಪಾಧೀಕ್ಷಕರಿಗೆ ನೀಡಿ ಅವರಿಂದ ಸ್ವೀಕೃತಿಯನ್ನು ಪಡೆದಿರುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರವಾಗಿ ಶ್ರೀ ಸಿ ಎನ್ ವಿ ವಕೀಲರಿಂದಃ**

ನನಗೆ ತನಿಖೆ ಮಾಡಲು ಪೊಲೀಸ್ ಉಪಾಧೀಕ್ಷಕರು ಲಿಖಿತವಾಗಿ ಆದೇಶ ಮಾಡಿರುತ್ತಾರೆ. ನಾನು ಆರೋಪಿತರ ಮನೆಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಆರೋಪಿ ಮತ್ತು ಅವರ ಹೆಂಡತಿ ಮಾತ್ರ ಇದ್ದರು. ಶೋಧನಾ ವಾರೆಂಟಿನಲ್ಲಿ ಮನೆಯ ಡೋರ್ ನಂಬರ್ ಮತ್ತು ಆ ಮನೆ ಇರುವ ಪ್ರದೇಶ ಇತ್ಯಾದಿ ವಿಚಾರ ಖಚಿತವಾಗಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ವಾಸದ ಮನೆಯಲ್ಲಿ ಹಲವಾರು ವಸ್ತುಗಳು ಇರುತ್ತವೆ ಎಂದರೆ ಸರಿ. ಆ ಮನೆಯಲ್ಲಿ ಬಳಸಿದ್ದ ಮರಗಳ ಮೌಲ್ಯಮಾಪನವನ್ನು ಅರಣ್ಯಾಧಿಕಾರಿಗಳು ಮಾಡಬೇಕು ಎಂದರೆ ಸಾಕ್ಷಿಯು ನಿಖರವಾಗಿ ಮಾಡಬೇಕಾದರೆ ಅರಣ್ಯಾಧಿಕಾರಿಗಳ ಅವಶ್ಯಕತೆ ಇರುತ್ತದೆ, ಅಂದಾಜು ಮೌಲ್ಯವನ್ನು ನಾವು ಮತ್ತು ಪಂಚರು ಮಾಡಬಹುದು ಎನ್ನುತ್ತಾರೆ. ಮನೆಯಲ್ಲಿರುವ ಅಲಂಕಾರಿಕ ವಸ್ತುಗಳ ಮೌಲ್ಯಮಾಪನವನ್ನು ಅದರ ಮಾರಾಟಗಾರರ ಮೂಲಕ ಮಾಡಿಸಬೇಕಾಗುತ್ತದೆ ಎಂದರೆ ಸಾಕ್ಷಿಯು ಅಂದಾಜು ಮೌಲ್ಯವನ್ನು ನಾವೂ ಮಾಡಬಹುದು ಎನ್ನುತ್ತಾರೆ. ಅದೇ ರೀತಿ ಮನೆಯಲ್ಲಿರುವ ತಾಂತ್ರಿಕ ವಸ್ತುಗಳ ಮೌಲ್ಯವನ್ನು ತಾಂತ್ರಿಕ ವ್ಯಕ್ತಿಯೇ ಮಾಡಬೇಕು ಎಂದರೆ ಸಾಕ್ಷಿಯು ನಾವೂ ಮಾಡಬಹುದು ಎನ್ನುತ್ತಾರೆ. ಎಲೆಕ್ಟ್ರಾನಿಕ್ ವಸ್ತುಗಳ ಮೌಲ್ಯಮಾಪನವನ್ನು ಸಹ ಎಲೆಕ್ಟ್ರಿಷಿಯನ್ ಮಾಡಬೇಕು ಎಂದರೆ ಸಾಕ್ಷಿಯು ನಾವು

ಅಂದಾಜು ಮೌಲ್ಯ ಮಾಡಬಹುದು ಎನ್ನುತ್ತಾರೆ. ಮರವನ್ನು ಮತ್ತು ಚಿನ್ನ, ಬೆಳ್ಳಿಯನ್ನು ಮೇಲ್ನೋಟಕ್ಕೆ ನೋಡಿದಾಗ ಅದು ಎಷ್ಟು ವರ್ಷಗಳ ಹಿಂದೆ ಖರೀದಿಸಿರುವುದು ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ಇವುಗಳ ಮೌಲ್ಯಮಾಪನವನ್ನು ನಾವು ದಾಳಿ ನಡೆಸಿದ ದಿನಾಂಕಕ್ಕೆ ಇದ್ದ ಬೆಲೆಯಂತೆ ಮಾಡಿಸಿರುವುದು ಎಂದರೆ ಸರಿ. ನಿಪಿ-1ರಲ್ಲಿ ಕಾಣಿಸಿದ ವಸ್ತುಗಳ ಮೌಲ್ಯಮಾಪನವನ್ನು ನಾವು ದಾಳಿ ಮಾಡಿದ ದಿನಾಂಕಕ್ಕೆ ಇದ್ದ ಬೆಲೆಯಂತೆ ಮಾಡಿಸಿರುವುದು ಎಂದರೆ ಸರಿ. ಈ ಎಲ್ಲ ವಸ್ತುಗಳು ಎಷ್ಟು ವರ್ಷ ಹಳೆಯದು ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ.

2.ಇಂತಹ ದಾಳಿ ಸಂದರ್ಭದಲ್ಲಿ ನಾವು ವೀಡಿಯೋ ಮಾಡುವುದು ಕಡ್ಡಾಯ ಎಂದರೆ ಸಾಕ್ಷಿಯು ಈಗ ಕಡ್ಡಾಯವಾಗಿರುತ್ತದೆ 2013ರಲ್ಲಿ ಇರಲಿಲ್ಲ ಎನ್ನುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವೀಡಿಯೋ ಮಾಡಿಸಲು ತೊಂದರೆ ಇರಲಿಲ್ಲ.

3.ನಾವು ದಾಳಿ ಮಾಡಿದ ಸಂದರ್ಭದಲ್ಲಿ ಆರೋಪಿತರ ಮಗ ಇದ್ದನು ಮತ್ತು ಆತನ ರೂಮಿನಲ್ಲಿ ದೊರೆತಂದಹ ಬಟ್ಟೆಗಳು ಮತ್ತು ಆತ ಉಪಯೋಗಿಸುತ್ತಿದ್ದ ವಾಹನ ಮತ್ತು ಇತರ ವಸ್ತುಗಳನ್ನು ತಾನು ತನ್ನ ಸ್ವಂತ ದುಡಿಮೆ ಹಣದಿಂದ ಖರೀದಿಸಿದ್ದು ಎಂದು ಹೇಳಿರುತ್ತಾನೆ ಎಂದರೆ ನನಗೆ ನೆನಪಿಲ್ಲ. ಅದೇ ರೀತಿ ಅವರ ಹೆಂಡತಿ ಕೂಡ ತಾನು ನೀಲಗಿರಿ ಎಣ್ಣೆ ವ್ಯಾಪಾರ ಮಾಡುತ್ತಿದ್ದು ಅದರಿಂದ ಬಂದಂತಹ ಹಣದಿಂದ ಆ ಮನೆಯಲ್ಲಿರುವ ಹಲವಾರು ವಸ್ತುಗಳನ್ನು ಖರೀದಿಸಿದ್ದು ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆ ಮನೆಯಲ್ಲಿ ಅವರ ತಾತ ಮತ್ತು ಮುತ್ತಾತರಿಂದ ಬಂದ ಹಳೆಯ ವಸ್ತುಗಳು ಇದ್ದವು ಎಂದರೆ ನನಗೆ ಈಗ ಹೇಳಲಾಗುವುದಿಲ್ಲ. ಹಾಗೆಯೇ ಅಲ್ಲಿದ್ದಂತಹ ವಸ್ತುಗಳಲ್ಲಿ ಅವರಿಗೆ ಉಡುಗೊರೆಯಾಗಿ ಬಂದಂತಹ ಹಲವಾರು

ವಸ್ತುಗಳಿದ್ದವು ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ.

4.ಅಲ್ಲಿ ದೊರೆತಂತಹ ವಸ್ತುಗಳು ಮತ್ತು ವಶಪಡಿಸಿಕೊಂಡ ವಸ್ತುಗಳ ಪ್ರತ್ಯೇಕ ಪಟ್ಟಿಯನ್ನು ಮಾಡಿ ಅದಕ್ಕೆ ನಮ್ಮ ಮತ್ತು ಪಂಚರ ಸಹಿ ಪಡೆದು ಪ್ರತಿಯನ್ನು ಆರೋಪಿತರಿಗೆ ನೀಡಿಲ್ಲ. ಸಾಕ್ಷಿಯು ಪಂಚನಾಮೆ ಪ್ರತಿ ನೀಡಿರುತ್ತೇನೆ ಎನ್ನುತ್ತಾರೆ.

5.ಅಲ್ಲಿ ದೊರೆತಂಹತ ಬಟ್ಟೆಗಳು ಯಾವಾಗ ಖರೀದಿ ಮಾಡಿದ್ದೆಂದು ನನಗೆ ಹೇಳಲಾಗುವುದಿಲ್ಲ. ಹೊಸ ಬಟ್ಟೆಗಳ ಬೆಲೆ ವರ್ಷಾನುಸಾರ ಹೆಚ್ಚಾಗುತ್ತಾ ಹೋಗುತ್ತದೆ ಎಂದರೆ ಸರಿ. ನಾನು ಅಲ್ಲಿದ್ದ ಬಟ್ಟೆಗಳ ಬೆಲೆಯನ್ನು ಅಂದಾಜಿಸಿರುವುದು ದಾಳಿ ಮಾಡಿದ ದಿನಾಂಕಕ್ಕೆ ಇದ್ದ ಬೆಲೆಯ ಅನುಸಾರ ಎಂದರೆ ಸರಿ.

6.ಅಕ್ಕಸಾಲಿಗರಿಂದ ನಾನು ಮೌಲ್ಯಮಾಪನ ಮಾಡಿದ ಬಗ್ಗೆ ಹೇಳಿಕೆ ಅಥವಾ ದೃಢೀಕರಣ ಪತ್ರ ಪಡೆದಿಲ್ಲ. ಅಲ್ಲಿ ಸಿಕ್ಕಿದ್ದಂತಹ ಬೆಳ್ಳಿ ಮತ್ತು ಚಿನ್ನದ ಒಡವೆಗಳು ತಲತಲಾಂತರದಿಂದ ಬಂದ ಒಡವೆಗಳು, ವಸ್ತುಗಳು ಮತ್ತು ಉಡುಗೊರೆಯಾಗಿ ಬಂದವು ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾವು ಅಲ್ಲಿ ದೊರೆತಂತಹ ವಸ್ತುಗಳಿಗೆ ಮಾರುಕಟ್ಟೆಯಲ್ಲಿದ್ದ ಬೆಲೆಗಿಂತ ದುಪ್ಪಟ್ಟು ನಿರ್ಧರಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ನಿಪಿ-1ರ ಪಂಚನಾಮೆಗೆ ಸಂಬಂಧಿಸಿದಂತೆ ಮತ್ತು ಅಲ್ಲಿ ದೊರೆತ ಎಲ್ಲಾ ದಾಖಲಾತಿಗಳಿಗೆ ಸಂಬಂಧಿಸಿದಂತೆ 14(ಎ) ರಂತೆ ವಿವರವಾದ ವಿವರಣೆಯನ್ನು ಈ ಕೇಸಿಗೆ ಸಂಬಂಧಪಟ್ಟಂತೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

7.ನಾವು ಶೋಧನೆ ಮಾಡಿದಾಗ ಅಲ್ಲಿ ಆರೋಪಿ ಮತ್ತು ಅವರ ಹೆಂಡತಿ ಅಲ್ಲದೆ ಅವರ ಒಬ್ಬ ಗಂಡು ಮಗ ಮತ್ತು ಇಬ್ಬರು ಹೆಣ್ಣುಮಕ್ಕಳು ಸಹ ಇದ್ದರು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**